




..ಮುಂದೆ ಜೀವನದಲ್ಲಿ ಎಂತೆಂಥ ಆರೋಪಗಳನ್ನು ಎದುರಿಸಬೇಕಾಗಿ ಬರುತ್ತೋ... ಪಾಪ!




ಮಕ್ಕಳಿಗೆ ಮನೆಯೆ ಮೊದಲ ‘ಪಾಠ ಶಾಲೆ’ ಅಂದ್ರೆ ಏನಮ್ಮಾ?



‘ಅಕ್ಷಯ ಪಾತ್ರೆ’ ಯೋಜನೆ ಯಾವುದು ಅಂತ ಕೇಳ್ತಿದ್ದೀಯಾ? ಪೆದ್ದಿ... ಸರಕಾರದ ಯೋಜನೆಗಳೆಲ್ಲಾ ಅಕ್ಷಯಪಾತ್ರೆ ನನ್ನ ಪಾಲಿಗೆ!




ಥೇ... ಬೆಲೆ ಏರಿಕೆ.. ಸಂಸಾರದ ರಗಳೆಯೇ ಬೇಡಾಂತ ಎಲ್ಲಾದ್ರೂ ಮಠ... ಮಂದಿರ ಸೇರ್ತೇನೆ ಅಂದ್ರೂ ಸಂಶಯದಿಂದ ನೋಡ್ತಾರೆ ಮಾರಾಯ್ರೇ..!

## ನಕ್ಕುಬಿಡಿ

ಮನೆಯಲ್ಲಿ ಪಾಠ ಮಾಡುತ್ತಿದ್ದ ತಂದೆ: ‘ಹೂ ಈಸ್ ದಿ ಸ್ಪೀಕರ್ ಆಫ್ ದಿ ಹೌಸ್?’
ಮಗ: ಅಮ್ಮ!


★★★

ವಿದ್ಯಾರ್ಥಿ: ನೀವು ಕೊಟ್ಟಿದ್ದ ಸಂಖ್ಯೆಗಳನ್ನು ಹತ್ತು ಬಾರಿ ಕೂಡಿದ್ದೇನೆ ಸರ್.
ಗಣಿತದ ಅಧ್ಯಾಪಕ: ಗುಡ್ ಬಾಯ್.
ವಿದ್ಯಾರ್ಥಿ: ಆದರೆ ಹತ್ತು ಬಾರಿಯೂ ಬೇರೆ ಬೇರೆ ಆನ್ಸರ್ಸ್ ಬಂದಿವೆ ಸರ್!

★★★

ಮನೆಗೆ ಆಟೋದಲ್ಲಿ ಬಂದಿಳಿದ ಪ್ರಾಧ್ಯಾಪಕ ಗಂಡನನ್ನು ಹೆಂಡತಿ ತರಾಟೆಗೆ ತೆಗೆದುಕೊಂಡಳು: ‘ಕಾರೆಲ್ಲಿರ್ರೀ?’
ಮರೆಗುಳಿ ಪ್ರಾಧ್ಯಾಪಕ: ‘ನಾನ್ ಕಾರು ತೊಗೊಂಡು ಹೋಗಿದ್ನಾ?’
ಹೆಂಡತಿ (ತಲೆ ಚಚ್ಚಿಕೊಳ್ಳುತ್ತಾ): ಅಯ್ಯೋ ದೇವರೇ! ನನ್ನಾಣೆಗೂ ತಗೊಂಡು ಹೋದಿರೀ ಕಣ್ರೀ; ಎಲ್ಲಿ ಬಿಟ್ರೀ?’

ಮರೆಗುಳಿ ಪ್ರಾಧ್ಯಾಪಕ: ‘ಅಯ್ಯೋ! ದಾರಿಯಲ್ಲಿ ಯಾರೋ ಒಬ್ಬ ಹೆಂಗಸು ಪಾಪ ಲಿಫ್ಟ್ ಕೇಳಿದಳು. ಕಾಲೇಜು ಬಳಿ ನಾನು ಇಳಿದು, ‘ಲಿಫ್ಟ್ ಕೊಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್ ಮೇಡಂ’ ಅಂತ ಅವರಿಗೆ ಹೇಳಿ ಕಾರಿಂದ ಇಳಿದು ಕಾಲೇಜಿಗೆ ಹೋದೆನಲ್ಲಾ!’



ಸಂಗ್ರಹ:ಎಸ್. ನವನೀತ್ ಗೌಡ, ಮಂಡ್ಯ